2. ಹಾಗಿದ್ದಲ್ಲಿ, ಈ ಬಗೆಗೆ ಕ್ರಮಗಳನ್ನೇನಾದರೂ ಕೈಗೊಂಡಿದೆಯೇ?

3. ಯೋಜನೆ ರೂಪಿಸಿದ್ದಲ್ಲಿ, ವಿವರಗಳೇನು?

4. ಗ್ರಾಮೀಣ ಸಂಪರ್ಕ ವ್ಯವಸ್ಥೆ ಅಭಿವೃದ್ಧಿಪಡಿಸಲು ಕೇಂದ್ರ ಸರಕಾರವು ನೆರವು ನೀಡಿದ್ದಲ್ಲಿ, ಅದರ ವಿವರಗಳೇನು?

ಉತ್ತರ

1. ಹೌದು ಮನಗಂಡಿದೆ.

2. ೧. 2000-01ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ರಾಜ್ಯಕ್ಕೆ 103.52 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು ಸದರಿ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿವೆ.

೨. ಗ್ರಾಮೀಣ ಭಾಗದ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ 2001-02 ಮತ್ತು 2002-03ನೇ ಸಾಲಿಗೆ ಸುಮಾರು 200.00 ಕೋಟಿ ರೂ.ಗಳ ಪ್ರಸ್ತಾವನೆಯು ಕೇಂದ್ರ ಸರ್ಕಾರದಿಂದ ಮಂಜೂರಾಗುವ ಹಂತದಲ್ಲಿದೆ.

೩. ನಬಾರ್ಡ್ ಆರ್.ಎ.ಡಿ.ಎಫ್. ಯೋಜನೆಗಳ ಅಡಿಯಲ್ಲಿ ಗ್ರಾಮೀಣ ರಸ್ತೆಗಳ ಸುಧಾರಣೆಗೆ ಸುಮಾರು 90.00 ಕೋಟಿ ರೂ.ಗಳ ಪ್ರಸ್ತಾವನೆಯು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ.

೪. ಪ್ರತಿ ತಾಲ್ಲೂಕಿಗೆ 100 ಲಕ್ಷ ರೂ.ಗಳ ಯೋಜನೆಯಡಿ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದು, ಈ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ.

3. ವಿವರ '2'ದಲ್ಲಿ ಒದಗಿಸಿದೆ.

4. 2000-01ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ 103.52 ಕೋಟಿ ರೂ.ಗಳ ಅಂದಾಜನ್ನು ಮಂಜೂರು ಮಾಡಲಾಗಿದೆ. 2001-02 ಮತ್ತು 2002-03ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಸುಮಾರು 200.00 ಕೋಟಿ ರೂ.ಗಳ ಪ್ರಸ್ತಾವನೆಯು ಕೇಂದ್ರ ಸರ್ಕಾರದಿಂದ ಮಂಜೂರಾಗುವ ಹಂತದಲ್ಲಿದೆ.

ಡಾ॥ ರಾಜರಾಮಣ್ಣನವರ ಸಮಿತಿಯ ವರದಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1063(1064)

ಸದಸ್ಯರ ಹೆಸರು: ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

1) ಡಾ: ರಾಜಾ ರಾಮಣ್ಣನವರ ನೇತೃತ್ವದ ಸಮಿತಿಯು ರಾಜ್ಯದ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ವರದಿಯನ್ನೇನಾದರೂ ನೀಡಿದೆಯೇ?

2) ಹಾಗಿದ್ದಲ್ಲಿ, ಈ ವರದಿಯಲ್ಲಿನ ವಿವರಗಳೇನು?

3) ಈ ವರದಿಯಲ್ಲಿನ ಯಾವ ಯಾವ ಅಂಶಗಳನ್ನು ಮತ್ತು ಸಲಹೆಗಳನ್ನು ಸರ್ಕಾರವು ಕಾರ್ಯರೂಪಕ್ಕೆ ತಂದಿದೆ?

4) ಇನ್ನೂ ಅನುಷ್ಠಾನಗೊಳ್ಳಬೇಕಾಗಿರುವ ಶಿಫಾರಸ್ಸುಗಳು ಯಾವುವು?

ಉತ್ತರ

1) ಮಧ್ಯಂತರ ವರದಿಗಳನ್ನು ಸಲ್ಲಿಸಿದೆ.

2) ವರದಿಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

3) ಅನುಬಂಧದಲ್ಲಿ ನಮೂದಿಸಿದೆ.

4) ಅನುಬಂಧದಲ್ಲಿ ನಮೂದಿಸಿದೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1064ಕ್ಕೆ ಅನುಬಂಧ

ಡಾ॥ ರಾಜಾರಾಮಣ್ಣನವರ 1ನೇ ವರದಿ

1) 14 ವರ್ಷಗಳತನಕ ಉಚಿತ ಪ್ರಾಥಮಿಕ ವಿದ್ಯಾಭ್ಯಾಸವನ್ನು ಒದಗಿಸುವುದು

ಎ) ೨೦೦೧-೦೨ನೇ ವರ್ಷ ಆರಂಭವಾಗುವಷ್ಟರಲ್ಲಿ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೫ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೫ ರಿಂದ ೮ರ ತನಕ ವರ್ಗಗಳಿರಬೇಕು ಎಂದು ಶಿಫಾರಸ್ಸು ಮಾಡಿದೆ.

1 ರಿಂದ 5ನೇ ವರ್ಗ ಜಾರಿಗೆ ತಂದಿದೆ. 5 ರಿಂದ 8ನೇ ವರ್ಗ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬಿ) ಒಂದರಿಂದ ನಾಲ್ಕು ತರಗತಿಗಳಿಗೆ ಹಾಜರಾಗುವ ವಯೋಮಿತಿಯ 15 ಮಕ್ಕಳು ಇರುವ ವಸತಿ ಪ್ರದೇಶದಲ್ಲಿ ಒಂದು ಶಾಲೆ, 15ಕ್ಕಿಂತ ಕಡಿಮೆ ಶಾಲೆಗಳಿಗೆ ಹಾಜರಾಗುವ ವಯೋಮಿತಿಯ ಮಕ್ಕಳು ಇರುವ ಶಾಲಾ ರಹಿತ ವಸತಿ ಪ್ರದೇಶಗಳಲ್ಲಿ ಬದಲಿ ಶಾಲೆ (ಅನೌಪಚಾರಿಕ ಶಿಕ್ಷಣ ಕೇಂದ್ರ) ತೆರೆಯುವಂತೆಯೂ ಹಾಗೂ ಬದಲಿಗೆ ಪರ್ಯಾಯ ವ್ಯವಸ್ಥೆಗಾಗಿ ೧೫ಕ್ಕಿಂತ ಕಡಿಮೆ ಶಾಲೆಗೆ ಹೋಗುವ ವಯೋಮಿತಿಯ ಮಕ್ಕಳಿರುವ ಶಾಲಾ ವಸತಿ ಪ್ರದೇಶಗಳಿಂದ ಹತ್ತಿರದ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಸ್ಥಳೀಯ ಸಾರಿಗೆಯಾಗಿ ಎತ್ತಿನ ಬಂಡಿಗಳನ್ನು ನಿಗದಿಗೊಳಿಸಲು ಪಂಚಾಯತ್‌ಗಳಿಗೆ ಅನುದಾನ ನೀಡುವಂತೆ ಶಿಫಾರಸ್ಸು ಮಾಡಿದೆ.

ಚಿಣ್ಣರ ಅಂಗಳ ಎಂಬ ಕಾರ್ಯಕ್ರಮದ ಮೂಲಕ ಜಾರಿಗೆ ತರಲಾಗುತ್ತಿದೆ.

ಹಿಂದುಳಿದ 7 ಜಿಲ್ಲೆಗಳಲ್ಲಿ ಸಾಗಾಣಿಕೆ ವೆಚ್ಚ ನೀಡಲಾಗುತ್ತಿದೆ.

2) ಪ್ರತಿ ಶಾಲೆಗಳಿಗೆ ಕನಿಷ್ಟ ಸೌಲಭ್ಯಗಳಾದ ಶಾಲಾ ಕೊಠಡಿಗಳು, ಕಪ್ಪು ಹಲಗೆಗಳು, ಪೀಠೋಪಕರಣಗಳು, ಬೋಧನಾ ಸಾಮಗ್ರಿಗಳು ಮತ್ತು ಅರ್ಹತೆ ಹೊಂದಿದ ಶಿಕ್ಷಕರುಗಳನ್ನು ಒದಗಿಸುವಂತೆ ಶಿಫಾರಸ್ಸು ಮಾಡಿದೆ. ಇದರ ಜೊತೆಗೆ ಪ್ರತಿ ಶಾಲೆಗೆ ಅಗತ್ಯವಿರುವ ಶೌಚಾಲಯ ಸೌಲಭ್ಯಗಳು (ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ) ಮತ್ತು ಕುಡಿಯುವ ನೀರಿನ

ಹಂತ ಹಂತವಾಗಿ ಪೂರೈಸಲಾಗುತ್ತಿದೆ.

ಸೌಲಭ್ಯವನ್ನು ಒದಗಿಸುವಂತೆಯೂ ಶಿಫಾರಸ್ಸು ಮಾಡಿದೆ.

3) ಪ್ರತಿ ತರಗತಿಗೆ ಒಂದು ಕೊಠಡಿ, ಒಬ್ಬ ಶಿಕ್ಷಕ ಇರುವಂತೆ ಶಿಫಾರಸ್ಸು ಮಾಡಿದೆ. ಆದಕಾರಣ ಈ ನಿಟ್ಟಿನಲ್ಲಿ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡುವಂತೆ ಶಿಫಾರಸ್ಸು ಮಾಡಿದೆ. — ಹಂತ ಹಂತವಾಗಿ ಪೂರೈಸಲಾಗುತ್ತಿದೆ.

4) ಪ್ರಾಥಮಿಕ ಶಾಲಾ ಶಿಕ್ಷಕರುಗಳ ನೇಮಕಾತಿಗೆ ಇರುವ ನಿರ್ಬಂಧವನ್ನು ತೆಗೆಯುವಂತೆ ಶಿಫಾರಸ್ಸು ಮಾಡಿದೆ. — ಅನುಷ್ಠಾನಗೊಳಿಸಿದೆ.

5) ಬ್ಲಾಕ್‌ವಾರು ಶಿಕ್ಷಕರ ವೃಂದವನ್ನು ಸೃಜಿಸುವಂತೆ ಶಿಫಾರಸ್ಸು ಮಾಡಿದೆ. — ಅನುಷ್ಠಾನಗೊಳಿಸಿದೆ.

೬) ಶಿಕ್ಷಕನ ನೇಮಕಾತಿಗೆ ವಿದ್ಯಾರ್ಹತೆ:

ಎ) ಪ್ರಾಥಮಿಕ ಶಿಕ್ಷಕರ ತರಬೇತಿ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಒಂದು ವರ್ಷದ ಇಂಟರ್ನ್‌ಶಿಪ್ ತರಬೇತಿಗೆ ಅವಕಾಶ ಕಲ್ಪಿಸುವ ಮೂಲಕ ಬಲಪಡಿಸತಕ್ಕದ್ದು. — ಪರಿಶೀಲನೆಯಲ್ಲಿದೆ.

ಬಿ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಪ್ರವೇಶ ಪರೀಕ್ಷೆ ನಡೆಸುವುದು. — ಅನುಷ್ಠಾನಗೊಳಿಸಿದೆ.

ಸಿ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಶೀಘ್ರವಾಗಿ ತಿದ್ದುಪಡಿ ತರುವುದರ ಮೂಲಕ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವಿಜ್ಞಾನ/ ಇಂಗ್ಲೀಷ್ ಭಾಷೆಗಳನ್ನು ಅಭ್ಯಾಸ ಮಾಡಿದ ವ್ಯಕ್ತಿಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರುಗಳಾಗಿ ನೇಮಿಸುವುದು ಅಗತ್ಯ ಎಂದು ಶಿಫಾರಸ್ಸು ಮಾಡಿದೆ. — ಅನುಷ್ಠಾನಗೊಳಿಸಿದೆ.

7) ಶಿಕ್ಷಕರುಗಳಿಗೆ ಕ್ರಮಬದ್ಧ ಪುನಶ್ಚೇತನ ತರಬೇತಿ ನೀಡುವಂತೆ ಶಿಫಾರಸ್ಸು ಮಾಡಿದೆ. — ಚೈತನ್ಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ.

8) ಮಧ್ಯಾಹ್ನ ಉಪಹಾರ ಯೋಜನೆಯಡಿ ಈಗಿನ — ಈಶಾನ್ಯ ವಲಯದ 7

ಪದ್ಧತಿಯ ಬದಲು ಅಡಿಗೆ ಮಾಡಿ ಸಿದ್ಧಪಡಿಸಿದ ಆಹಾರವನ್ನು ಮಕ್ಕಳಿಗೆ ನೀಡುವಂತೆ ಶಿಫಾರಸ್ಸು ಮಾಡಿದೆ.	ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತಂದಿದೆ.
9) ಅಂಗನವಾಡಿಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ಒದಗಿಸುವಂತೆ ಶಿಫಾರಸ್ಸು ಮಾಡಿದೆ.	ಪರಿಶೀಲಿಸಲಾಗುತ್ತಿದೆ.
10) ಶಾಲೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶಾಸನಬದ್ಧ ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯನ್ನು ಸ್ಥಾಪಿಸುವುದು ಎಂದು ಶಿಫಾರಸ್ಸು ಮಾಡಿದೆ.	ಅನುಷ್ಠಾನಗೊಳಿಸಿದೆ.
11) ದಾಖಲಾತಿ ದರಗಳು, ಶಾಲೆ ಬಿಟ್ಟವರ ವಿವರಗಳು ಹಾಗೂ ಮಕ್ಕಳ ಸಾಧನೆಯ ವಿವರಗಳನ್ನು ಪಡೆಯುವ ಸಲುವಾಗಿ ಮಾಹಿತಿ ವ್ಯವಸ್ಥೆಯನ್ನು ರೂಪಿಸುವಂತೆ ಶಿಫಾರಸ್ಸು ಮಾಡಿದೆ.	ಅನುಷ್ಠಾನಗೊಳಿಸ-ಲಾಗುತ್ತಿದೆ.

ಡಾ॥ ರಾಜಾರಾಮಣ್ಣನವರ 2ನೇ ವರದಿ

12) ಸಹಾಯಕ ಸಂಸ್ಥೆಗಳ ಬಗ್ಗೆ ಶಿಫಾರಸ್ಸುಗಳು:	ಪರಿಶೀಲನೆಯಲ್ಲಿದೆ.
1) ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಗಳ ಸಾಧನೆಯನ್ನು ಪರಿಶೀಲಿಸುವುದು ಹಾಗೂ ಆ ಸಂಸ್ಥೆಗಳ ಕಾರ್ಯ ಉತ್ತಮಪಡಿಸುವುದು.	
2) ಪ್ರಶಿಕ್ಷಣದ ಗುಣಮಟ್ಟ ಉತ್ತಮಪಡಿಸುವುದು.	
3) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಸೇವಾ ಪೂರ್ವ ಶಿಕ್ಷಕರ ತರಬೇತಿ ಪ್ರತ್ಯೇಕಿಸುವುದು.	
4) ಬಿ.ಇ.ಡಿ.ನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಅಳವಡಿಸುವುದು.	
5) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಹಾಗೂ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ ಸ್ವಾಯತ್ತತೆಯನ್ನು ನೀಡುವುದು.	
6) ಪಠ್ಯ ಪುಸ್ತಕ ಸೊಸೈಟಿಯನ್ನು ಸ್ಥಾಪಿಸುವುದು.	

7) ಜಿಲ್ಲಾ ಶೈಕ್ಷಣಿಕ ಆಡಳಿತವನ್ನು ಸಂಘಟನೆಗೊಳಿಸುವುದು

ಶಾಲಾ ಮಟ್ಟ ಉತ್ತಮಪಡಿಸುವಿಕೆ ಕುರಿತ ಶಿಫಾರಸ್ಸುಗಳು: ಪರಿಶೀಲನೆಯಲ್ಲಿದೆ.

1) ಶಾಲೆಗಳ ಹಂತದಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಅಳೆಯುವುದು.

2) ಸೇವಾ ನಿರತ ತರಬೇತಿ ಕಾರ್ಯಕ್ರಮಗಳ ಮೂಲಕ ಗುಣಮಟ್ಟವನ್ನು ಸುಧಾರಿಸುವುದು.

3) ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ತರಬೇತಿಯಲ್ಲಿ ಶೈಕ್ಷಣಿಕ ತಂತ್ರ ಜ್ಞಾನವನ್ನು ಬಳಸುವುದು.

4) ಗಣಿತ ಮತ್ತು ಇಂಗ್ಲೀಷ್ ಬೋಧನೆಯ ಸುಧಾರಣೆ.

5) ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪದವೀಧರ ವಿಜ್ಞಾನ ಹಾಗೂ ಇಂಗ್ಲೀಷ್ ಶಿಕ್ಷಕರ ನೇಮಕ.

6) ಸರ್ಕಾರಿ ಶಾಲೆಗಳಿಗೆ ನಿರ್ವಹಣಾ ಅನುದಾನ ಒದಗಿಸುವುದು.

7) ಅಧಿಕೃತ ಕೆಲಸದ ದಿನಗಳ ಸಂಖ್ಯೆಯನ್ನು ನಿಗದಿ ಪಡಿಸುವುದು.

8) ಅಂಗವಿಕಲತೆ ಹೊಂದಿರುವ ಮಕ್ಕಳಿಗೆ ಶಿಕ್ಷಣ.

9) ಪ್ರಾಥಮಿಕ ಹಂತದಲ್ಲಿ ಪ್ರತಿಭಾನ್ವಿತ ಶಿಕ್ಷಕರನ್ನು ಗುರುತಿಸುವುದು.

10) ನಗರ ಪ್ರದೇಶಗಳಲ್ಲಿನ ಶಾಲೆಗಳಿಗೆ ನಿವೇಶನ ಒದಗಿಸುವುದು.